# ಮಧುಕರ ವೃತ್ತಿ ಎನ್ನದು

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page no. 432.
2. **Ref.:** Shri Purandara Dasara Sahitya Part – 3, Mahatmya Gnyana, edited by Shri Betageri Krishna Sharma and Shri Bengeri Huchha Rayaru, page no. 31.
3. **Ref.:** Purandara Sahitya Darshana, Samputa 1, Jeevana Darshana edited by Prof. S.K. Ramachandra Rao, page no. 107.
4. **Note:** The wordings given without highlights are as per Ref. 1. The wordings in Ref. 3 are same as Ref. 1. The lyrics in Ref. 2 are similar to Ref. 1 except few differences, which are marked in yellow highlights.
5. **Note:** Singer has followed the lyrics as in Ref. 1.

ರಾಗ ಭೈರವಿ ತಾಳ ಆದಿ

ಮಧುಕರ ವೃತ್ತಿ ಎನ್ನದು ಅದು ಬಲು ಚೆನ್ನದು ॥ ಪ ॥
ಪದುಮನಾಭನ ಪಾದ ಪದುಮ ಮಧುಪವೆಂಬ ॥ ಅಪ ॥

ಕಾಲಿಗೆ ಗೆಜ್ಜೆ ಕಟ್ಟಿ ನೀಲ ವರ್ಣನ ಗುಣ
ಆಲಾಪಿಸುತ್ತ ಬಲು ಓಲಗ ಮಾಡುವಂಥ ॥ ೧ ॥

ರಂಗನಾಥನ ಗುಣ ಹಿಂಗದೆ ಪಾಡುತ್ತ
(ಶೃಂಗಾರ ನೋಡುತ್ತಾ ಕಂಳಾನಂದವೆಂಬ)
(ಕಂಗಳಾನಂದದಿಂದ ಸಿಂಗರವ ನೋಡುವಂಥ) ॥ ೨ ॥

ಇಂದಿರಾಪತಿ (ಪುರಂದರ ವಿಠಲನಲ್ಲಿ) (ಶ್ರೀ ಪುರಂದರ ವಿಠ್ಠಲನ)
(ಚೆಂದದ ಭಕ್ತಿಯಿಂದಾನಂದವ ಪಡುವಂಥ)
(ಚೆಂದದಿ ಪಾಡಿ ಆನಂದದಿ ಪೊಗಳುವಂಥ ) ॥ ೩ ॥

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

ಈ ಹಾಡು ಹರಿದಾಸ ದೀಕ್ಷೆಯ ಸ್ವಾರಸ್ಯವನ್ನು ವಿವರಿಸುತ್ತದೆ. ಹರಿದಾಸರು ಲೌಕಿಕರಂತೆ ಯಾವ ಉದ್ಯೋಗವನ್ನೂ ಹಿಡಿಯುವುದಿಲ್ಲ; ಅವರು ಹರಿಸಂಕೀರ್ತನ ಮಾಡುತ್ತ ಊರೂರು, ಕೇರಿಕೇರಿ ಅಲೆದಾಡುತ್ತಾರೆ; ಅವರಿವರು ಕೊಡುವ ಆಹಾರ ಸಾಮಗ್ರಿಗಳನ್ನು ಪಡೆದುಕೊಂಡು ಹೋಗುತ್ತಾರೆ. ಇದನ್ನು ಇಲ್ಲಿ ದುಂಬಿಯ ಅಲೆದಾಟಕ್ಕೆ ಹೋಲಿಸಿದ್ದಾರೆ. ದುಂಬಿಯ ನೆಗೆದಾಟ, ಝೇಂಕಾರಗಳು ಹರಿದಾಸರ ನರ್ತನ–ಗೀತಗಳಿಗೆ ಸಮ. 'ಮಧುಕರ ವೃತ್ತಿ' ಯೆನ್ನುವುದು ಧರ್ಮ ಶಾಸ್ತ್ರದಲ್ಲಿ ಅಧ್ಯಾತ್ಮ ನಿಷ್ಠೆಯುಳ್ಳವರಿಗೆ ವಿಹಿತವಾಗಿದೆ. ಮಾಡುವ ಕೆಲಸಕ್ಕೂ ಒಂದು ವೃತ್ತಿ ಗೌರವವನ್ನು ಸಂಪಾದಿಸಿಕೊಡುವ ಸುಂದರ ಪದ ಇದು. ಅಕ್ಕಿಯ ಭಿಕ್ಷೆಯನ್ನು ಪಡೆದು ಹಾಡಿನ ಭಿಕ್ಷೆಯನ್ನು ನೀಡುವ ಕಾಯಕ ಇವರದಾಗಿತ್ತು. ಈ ಸಂಚಾರೀ ಗಾಯಕರ ತಂಡದ ಕಾರ್ಯವನ್ನು ಶ್ಲೇಷೆಯಿಂದ ಪುರಂದರ ದಾಸರು ಸೊಗಸಾಗಿ ವಿವರಿಸಿದ್ದಾರೆ.

**ಮಧುಕರ ವೃತ್ತಿ** – ಮಧುಕರವೆಂದರೆ ಜೇನು ನೊಣ (ಭ್ರಮರ). ಅದು ಯಾವೊಂದು ಹೂವಿಗೂ ಅಂಟಿಕೊಳ್ಳದೆ ಹಲವಾರು ಹೂಗಳ ಮೇಲೆ ಕುಳಿತು ಬಂಡನುಂಡು ಒಡನೆಯೇ ಹಾರಿ ಹೋಗುವಂತೆ ಹರಿದಾಸನೂ ಮನೆಮನೆಗೆ ಹೋಗಿ ಉಪಾದಾನವನ್ನು ಪಡೆದುಕೊಂಡು, ಯಾವ ಮನೆಯ ಕೋಟಲೆಯನ್ನೂ ತಲೆಗೆ ಹಚ್ಚಿಕೊಳ್ಳದೆ ತನ್ನ ಪಾಡಿಗೆ ತಾನು ನೆಮ್ಮದಿಯಿಂದ ಹರಿ ಸ್ಮರಣೆ ಮಾಡುತ್ತಾನೆ. ಇದು ಮಧುಕರ ವೃತ್ತಿ; ಜೇನು ನೊಣದಂತೆ ಅಲೆಯುವುದು. ಇದನ್ನು ಸಂನ್ಯಾಸಿಗಳ, ಪರಿವ್ರಾಜಕರ ಧರ್ಮವೆಂದು ಶಾಸ್ತ್ರ ವಿಧಿಸುತ್ತದೆ. ಭಾಗವತದಲ್ಲಿ ಭಗವದ್ಭಕ್ತರೂ ಹೀಗೆಯೇ ತಮ್ಮೆಲ್ಲ ವ್ಯವಹಾರದಲ್ಲೂ ಭಗವಂತನ ಇರವನ್ನೇ ಕಾಣುತ್ತಾರೆಂದೂ ಅವರ ವೃತ್ತಿ ಮಧುಕರ ವೃತ್ತಿಯೆಂದೂ ಹೇಳಿದೆ ('ಸರ್ವತಃ ಸಾರಮಾದತ್ತೇ ಯಥಾ ಮಧುಕರೋ ಬುಧಃ.' ಭಾಗವತ 41, 18, 2). ಹೂವಲ್ಲಿರುವ ಸಾರವನ್ನು, ಜೇನನ್ನು, ದುಂಬಿ ಹೀರಿಕೊಳ್ಳುವಂತೆ ಹರಿದಾಸನು ಹರಿಯ ಚರಣ ಕಮಲದಲ್ಲಿರುವ ಸಾರವನ್ನು, ಜೇನನ್ನು (ಮಧು) ಹೀರಿಕೊಳ್ಳುವುದರಿಂದ ಅವನು 'ಮಧು–ಪ'ನೇ (ಮಧು ಪಿಬತಿ ಇತಿ); ದುಂಬಿಯಂತೆಯೇ ಅವನ ಬದುಕು. ಅವನನ್ನು ಚಾರಣ–ಗಾಯಕ' ಎಂದು ಬಣ್ಣಿಸಬಹುದು.

**ನೀಲ ವರ್ಣನ** – ಮೋಡದಂತೆ ಕಪ್ಪಾದ ಬಣ್ಣವುಳ್ಳ ಕೃಷ್ಣ (ನೀಲಮೇಘ ಶ್ಯಾಮ).

**ಆಲಾಪಿಸುತ್ತ** = ಕೊಂಡಾಡುತ್ತಾ

**ಓಲಗ ಮಾಡುವಂಥ** – ಅವನ ಗುಣಗಳನ್ನು ಹಾಡುತ್ತ, ಅವನೆದುರೇ ನಿಂತು ಸೇವೆ ಮಾಡುವುದು ಓಲಗ. ಓಗಲ ಮಾಡು ಎಂದರೆ ದರ್ಬಾರು ಮಾಡು, ಚಾಕರಿ ಮಾಡು ಎಂಬ ಎರಡು ಅರ್ಥಗಳೂ ಅಲ್ಲಿ ಸಂಗತವಾಗುತ್ತವೆ.

**ಹಿಂಗದೆ** – ಬೇಸರವಿಲ್ಲದೆ; ಮುಗಿಯಿತು ಎಂದೆನ್ನದೆ.

**ಶೃಂಗಾರ ನೋಡುತ್ತ** – ಸುಂದರವಾದ ಅವನ ಅರ್ಚಾ ಮೂರ್ತಿಗಳನ್ನು ನೋಡುತ್ತ.

**ಇಂದಿರಾ ಪತಿ** – ಲಕ್ಷ್ಮಿಯ ಗಂಡ, ನಾರಾಯಣ.

**Classification:** Keerthane
**Ankita:** purandara vittala
**Location:** NA
**Category:** jeevana darshana, Tatva Jnana, Mahatmya Gynana.
**Sub-Category:** madhukara, padma, ranga, kannu, Krishna, pati, deva, gejje, jenu, Ananda,
**Pravachana:** NA
**Explanation:** NA